


# ಬೆಳ್ಳಿ ಶೃಂಗಾರ



**ಆಕಾಶವೆಂದರೆ ಮೋಡಗಳ ಸಾಮ್ರಾಜ್ಯ. ಆ ಮೋಡಗಳೋ ಎಷ್ಟೊಂದು ವೈವಿಧ್ಯಮಯ!**

■ **ದಿನೇಶ್ ಹೊಳ್ಳ**
ಚಿತ್ರಗಳು: ಕಲ್ಪಿತಾ

**ಜಾ**ತಿ, ಮತ, ಸಂಸ್ಕೃತಿ, ರಾಜ್ಯ, ದೇಶ, ಖಂಡ ಬೇರೆ ಬೇರೆ ಇರಬಹುದು. ಹಳ್ಳಿಯಿರಬಹುದು, ದಿಲ್ಲಿಯಿರಬಹುದು, ಕರ್ನಾಟಕವಿರಬಹುದು, ಅಮೆರಿಕಾವಿರಬಹುದು. ಆದರೆ ಇಡೀ ಜಗತ್ತಿಗೇ ಆಕಾಶ ಮಾತ್ರ ಒಂದೇ. ಆಕಾಶವೆಂದರೆ ಮೋಡಗಳ ಸಾಮ್ರಾಜ್ಯ.

ಆಕಾಶವನ್ನು ಸಿಂಹಾಸನದಲ್ಲಿ ಕುಳಿತ ಮಹಾರಾಜನಿಗೆ ಹೋಲಿಸಿದರೆ, ಮೋಡಗಳು ಮಹಾರಾಜನ ಮಂತ್ರಿಗಳು ಹಾಗೂ ಪ್ರಜೆಗಳಿದ್ದಂತೆ. ಆಕಾಶವನ್ನು ಯುದ್ಧಕ್ಕೆ ಹೊರಟ ದಂಡನಾಯಕನಿಗೆ ಹೋಲಿಸಿದರೆ ಮೋಡಗಳು ಯುದ್ಧಕ್ಕೆ ಸನ್ನದ್ಧರಾದ ಸೈನಿಕರಂತೆ. ಆಕಾಶವನ್ನು ಒಂದು ಆರ್ಟ್ ಗ್ಯಾಲರಿಗೆ ಹೋಲಿಸಿದರೆ ಅಲ್ಲಿರುವ

(8ನೇ ಪುಟ ನೋಡಿ)